**ಸಾಕ್ಷಿಯನ್ನು ದಿನಾಂಕಃ 28-07-2022 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ.ಕೆ.ಎನ್.ಆರ್ ವಕೀಲರವರಿಂದಃ**

**ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ. ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸದರಿ ಸಾಕ್ಷಿಯನ್ನು ಪಿ ಡಬ್ಲೂ 1 ಎಂದು ಪರಿಗಣಿಸಲಾಗಿದೆ.**

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನ ಅಜ್ಜ ಮತ್ತು ಆತನ ಸಹೋದರನಾದ ಅಜ್ಜಪ್ಪನ ಹೆಂಡತಿ ಗಂಗಮ್ಮ ಇವರ ನಡುವೆ ಆದಂತಹ ಪಾಲುವಿಭಾಗಪತ್ರ ಮತ್ತು ಖರೀದಿ ಪತ್ರಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತೇನೆ. ಸದರಿ ದಾಖಲೆಗಳ ಮೂಲ ಪ್ರತಿಯಬಗ್ಗೆ ವಿಚಾರಿಸಲಾಗಿ, ಸದರಿ ದಾಖಲೆಗಳು ಕಳೆದುಹೋಗಿರುತ್ತದೆ ಎಂದು ಹೇಳಿದ್ದರಿಂದ ಸದರಿ ದಾಖಲೆಗಳ ದೃಢೀಕೃತ ಪ್ರತಿಗಳನ್ನು ನಿಪಿ 1 ಮತ್ತು 2 ಎಂದು ಗುರುತಿಸಲಾಯಿತು. ದಿಃ26-05-2003 ರಂದು ಆದ ಎರಡು ಕ್ರಯಪತ್ರಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತೇನೆ ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸರ್ವೆ ನಂ.399/ಬಿ ನೇದ್ದಕ್ಕೆ ಸಂಬಂದಿಸಿದ ಆರು ಕೈಬರಹ ಪಹಣಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ 5 ರಿಂದ 10 ಎಂದು, ಸರ್ವೆ ನಂ.399/ಬಿ ನೇದ್ದಕ್ಕೆ ಸಂಬಂದಿಸಿದ ಒಂದು ಪಹಣಿಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 11 ಎಂದು, ಎಂ.ಆರ್ ನಂ.31/2003-2004 ನೇದ್ದನ್ನು ಹಾಜರುಪಡಿಸಿದ್ದು ಅನ್ನು ನಿಪಿ 12 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ** ಶ್ರೀ.ಕೆ.ಎ.ಬಿ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**